**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಮಂಜುನಾಥ ಭಂಡಾರಿ ಹಾಗೂ ಶ್ರೀ ರವಿಕುಮಾರ್ ಎನ್.ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರಿಸುವ ಬಗ್ಗೆ.**

**ಪ್ರಶ್ನೆ**

ಶಾಲೆ ಸೇರ್ಪಡೆ ವಯೋಮಿತಿ ಗೊಂದಲ, ಖಾಸಗಿ ಸ್ಕೂಲ್‌ಗಳಲ್ಲಿ ಪ್ರವೇಶ ನಕಾರ, ಕಂಗಾಲಾದ ಪೋಷಕರಿಂದ ಮುಖ್ಯಮಂತ್ರಿಯವರಿಗೆ ದೂರು ಎಂಬ ಶೀರ್ಷಿಕೆಯಡಿ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ. ರಾಜ್ಯದಲ್ಲಿ ಮುಂದಿನ ಶೈಕ್ಷಣಿಕ ವರ್ಷದ ಪ್ರವೇಶ ಪ್ರಕ್ರಿಯೆ ಈಗಾಗಲೇ ಆರಂಭವಾಗಿದ್ದು ವಯೋಮಿತಿ ಗೊಂದಲವು ಶಾಲಾ ಆಡಳಿತ ಮಂಡಳಿ ಮತ್ತು ಪಾಲಕರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಶಿಕ್ಷಣ ಇಲಾಖೆಯು ಕಳೆದ 8 ವರ್ಷದಲ್ಲಿ ಐದಕ್ಕೂ ಹೆಚ್ಚು ಸಲ ವಯೋಮಿತಿ ತಿದ್ದುಪಡಿ ಮಾಡಿದೆ.

2024-25ನೇ ಸಾಲಿನ ಪ್ರವೇಶಕ್ಕೆ ವಯೋಮಿತಿ ನಿಗದಿಯ ಆದೇಶಗಳನ್ನು ಶಿಕ್ಷಣ ಇಲಾಖೆಯು ಅಧಿಕೃತವಾಗಿ ಬಿಡುಗಡೆ ಮಾಡಿಲ್ಲ. ಆದರೆ ಖಾಸಗಿ ಶಾಲೆಗಳು ಈಗಾಗಲೇ ಪ್ರವೇಶ ಪ್ರಕ್ರಿಯೆಯನ್ನು ಆರಂಭಿಸಿರುವುದರಿಂದ ಪೂರ್ವ ಪ್ರಾಥಮಿಕ ಶಾಲೆಗಳಿಗೆ 2024ರ ಜೂನ್ 1ಕ್ಕೆ ಮಗುವಿಗೆ 4 ವರ್ಷ ತುಂಬಿರಬೇಕೆಂಬ ಷರತ್ತಿನ ಮೇಲೆ ಪ್ರವೇಶ ಕಲ್ಪಿಸುತ್ತಿವೆ. ಇದಕ್ಕಿಂತ ಕಡಿಮೆ ಮತ್ತು ಹೆಚ್ಚು ವಯಸ್ಸಿನ ಮಕ್ಕಳಿಗೆ ಪ್ರವೇಶ ನಿರಾಕರಿಸುತ್ತಿವೆ.

ಶಾಲೆಗಳು ಅನಧಿಕೃತವಾಗಿ ಆರಂಭಿಸಿರುವ ಪ್ರವೇಶ ಪ್ರಕ್ರಿಯೆಯನ್ನು ರದ್ದು ಮಾಡಬೇಕು. ಇಲ್ಲವೇ ಸೂಕ್ತ ವಯೋಮಿತಿ ನಿಗದಿ ಮಾಡಿ ಹೊಸ ಸುತ್ತೋಲೆ ಹೊರಡಿಸಬೇಕೆಂದು ಪಾಲಕರ ಸಂಘಟನೆಯು ಶಿಕ್ಷಣ ಸಚಿವರು ಹಾಗೂ ಮುಖ್ಯಮಂತ್ರಿಯವರಿಗೆ ಪತ್ರ ಬರೆದು ಮನವಿ ಮಾಡಿದೆ.

ಖಾಸಗಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಮತ್ತು 1ನೇ ತರಗತಿಗೆ ಪ್ರವೇಶ ಸಿಗದ ಮಕ್ಕಳನ್ನು ಅನಿವಾರ್ಯವಾಗಿ ಕಿಂಡರ್ ಗಾರ್ಡನ್, ನರ್ಸರಿ, ಮಾಂಟೇಸರಿ ಶಾಲೆಗಳಿಗೆ ದಾಖಲಿಸಬೇಕಾಗಿದೆ. ಈ ಶಾಲೆಗಳು 50 ಸಾವಿರದಿಂದ ಒಂದು ಲಕ್ಷಕ್ಕೂ ಮೇಲ್ಪಟ್ಟು ಶುಲ್ಕವನ್ನು ವಸೂಲಿ ಮಾಡುತ್ತಿವೆ. ಆದ್ದರಿಂದ ರಾಜ್ಯದ ವಿದ್ಯಾರ್ಥಿಗಳು ಮತ್ತು ಪಾಲಕರ ಹಿತದೃಷ್ಟಿಯಿಂದ ವಯೋಮಿತಿಗೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆ ಕೂಡಲೇ 2024-25 ನೇ ಸಾಲಿನ ಪ್ರಸಕ್ತ ವರ್ಷದ ವಯೋಮಿತಿ ನಿಗದಿಯ ಆದೇಶವನ್ನು ಹೊರಡಿಸಬೇಕೆಂದು ಮತ್ತು ಪ್ರವೇಶ ಶುಲ್ಕವನ್ನು ಕಡಿಮೆ ಮಾಡಲು ಕ್ರಮ ಕೈಗೊಂಡು ಮತ್ತು ಈಗಾಗಲೇ ಶಾಲೆಗಳು ಅನಧಿಕೃತವಾಗಿ ಆರಂಭಿಸಿರುವ ಪ್ರವೇಶ ಪ್ರಕ್ರಿಯೆಯನ್ನು ರದ್ದು ಮಾಡಿ ರಾಜ್ಯದ ಪೋಷಕರ ಗೊಂದಲವನ್ನು ಶಿಕ್ಷಣ ಇಲಾಖೆ ಬಗೆಹರಿಸಬೇಕೆಂದು ಕೋರಿರುತ್ತಾರೆ.

**ಉತ್ತರ**

ಆರ್.ಟಿ.ಇ ಕಾಯಿದೆ 2009 ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು 2012ರಂತೆ ಆದೇಶ ಸಂಖ್ಯೆ : ಇಪಿ 260ಪಿಜಿಸಿ 2021, ದಿನಾಂಕ:26.07.2022 ಮತ್ತು ತಿದ್ದುಪಡಿ ಆದೇಶ ಸಂಖ್ಯೆ

ಇಪಿ 387 ಪಿಜಿಸಿ 2022, ದಿನಾಂಕ: 15.11.2022 ರಲ್ಲಿ "**2025-26ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ"** ಶೈಕ್ಷಣಿಕ ವರ್ಷದ ಜೂನ್ 1 ನೇ ತಾರೀಖಿಗೆ ಕಡ್ಡಾಯವಾಗಿ 06 ವರ್ಷಗಳು ಪೂರ್ಣಗೊಂಡಿರುವ ಮಗುವನ್ನು ಒಂದನೇ ತರಗತಿಗೆ ದಾಖಲಿಸಲು ವಯೋಮಿತಿಯನ್ನು ನಿಗಧಿಪಡಿಸಲಾಗಿದೆ. ಈ ಆದೇಶ ಎರಡು ವರ್ಷಗಳ ನಂತರ ಜಾರಿಗೆ ಬರುತ್ತಿದ್ದು, ಇಲಾಖಾಧಿಕಾರಿಗಳ ಮೂಲಕ ಈಗಾಗಲೇ ಪೋಷಕರ ಗಮನಕ್ಕೆ ತರಲಾಗಿದೆ. ಅದಕ್ಕೆ ಪೂರಕವಾಗಿ, ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ರವರಿಂದ 2023-24ನೇ ಸಾಲಿನಿಂದ ಎಲ್.ಕೆ.ಜಿ ತರಗತಿಗೆ ದಾಖಲಾತಿ ಹೊಂದಲು ಜೂನ್ 1ನೇ ತಾರೀಖಿಗೆ ಅನ್ವಯವಾಗುವಂತೆ 04 ವರ್ಷಗಳ ವಯೋಮಿತಿಯನ್ನು ನಿಗಧಿಪಡಿಸಿ ದಿನಾಂಕ: 27.04.2023 ರಲ್ಲಿ ಜ್ಞಾಪನ ಹೊರಡಿಸಲಾಗಿದೆ.

ರಾಜ್ಯ ಯೋಜನಾ ನಿರ್ದೇಶಕರ ದಿನಾಂಕ:27.04.2023 ರ ನಿರ್ದೇಶನವನ್ನು ಪ್ರಶ್ನಿಸಿ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ : 11173/2023 ದಾಖಲಾಗಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ : 26/07/2023 ರಂದು ಸದರಿ ಅರ್ಜಿಯನ್ನು ವಜಾಗೊಳಿಸಿ ತೀರ್ಪು ನೀಡಿರುತ್ತದೆ.

**ಸಂಖ್ಯೆ:ಇಪಿ 372 ಪಿಜಿಸಿ 2023**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು